ಅಧ್ಯಕ್ಷರು: ದಯವಿಟ್ಟು ತಾವು ಅರ್ಥಮಾಡಿಕೊಳ್ಳಬೇಕು. When the Minister himself is requesting. "Wait for some time, We will settle the matter" ಎಂದು ಅವರು ಹೇಳಿದ್ದಾರೆ. ಇನ್ನೂ ಅದರ ಮೇಲೆ ಏನು ಹೇಳುತ್ತೀರಿ?

ಶ್ರೀ ಸಿ.ಬಿ.ಸುರೇಶ್‌ಬಾಬು: ಅಲ್ಲಿ ನ್ಯಾಷನಲ್ ಹೈವೇ ಇದ್ದು ನಾಲ್ಕು ದಾರಿಗಳು ಕೂಡುತ್ತವೆ. ಅಲ್ಲಿ ಸಾಕಷ್ಟು ಇನ್ಸಿಡೆನ್ಸ್ ಆಗುತ್ತಿವೆ. ಆದಷ್ಟು ಬೇಗ ಅದನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಇರತಕ್ಕಂಥಾದ್ದು 62 ಹಳ್ಳಿಗಳಿಗೆ ಸಂಬಂಧಪಟ್ಟಂಥ ಪೋಲೀಸ್ ಸ್ಟೇಷನ್. ಅದರ ಮಹತ್ವ ತಿಳಿದುಕೊಂಡೇನೇ ಅಲ್ಲಿ ಈಗಾಗಲೇ ಒಂದು ಔಟ್‌ಪೋಸ್ಟ್ ಇದೆ. ಅದನ್ನು ಅಪ್‌ಗ್ರೇಡ್ ಮಾಡಬೇಕು ಎಂದರೆ ನಮಗೆ ಹಣದ ಅಭಾವ ಇದೆ. ತಿಪಟೂರು ರೂರಲ್ ಪೋಲೀಸ್ ಸ್ಟೇಷನ್‌ನನ್ನು ಅಲ್ಲೇ ಇಟ್ಟು ಇದನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಸಾಧ್ಯತೆಯನ್ನು ನೋಡುತ್ತಿದ್ದೇವೆ. ಹಣಕಾಸಿನ ವ್ಯವಸ್ಥೆ ಸರಿ ಹೋದ ಮೇಲೆ ಖಂಡಿತವಾಗಿಯೂ ಅದಕ್ಕೆ ಆದ್ಯತೆಯನ್ನು ಕೊಡುತ್ತೇವೆ. ನೀವು ಹೇಳುವುದರಲ್ಲಿ ಅರ್ಥವಿದೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಆ ದೃಷ್ಟಿಯಿಂದಲೇ ಇದನ್ನು ಎಕ್ಸಾಮಿನ್ ಮಾಡಿ ಸಧ್ಯಕ್ಕೆ ಈಗ ಔಟ್‌ಪೋಸ್ಟ್‌ನ್ನು ಮಾಡಿಕೊಟ್ಟಿದ್ದೇವೆ. ಇದನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಆರ್.ಇ.ಸಿ. ಯೋಜನೆಯಡಿಯಲ್ಲಿ ಕೆ.ಪಿ.ಟಿ.ಸಿ.ಎಲ್. ನವರು ಗುರುತಿಸಿರುವ ಉಪಗ್ರಾಮಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 86(900)

ಸದಸ್ಯರ ಹೆಸರು: ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ)

ಪ್ರಶ್ನೆ

ಅ. ಕೆ.ಪಿ.ಟಿ.ಸಿ.ಎಲ್. ನವರು ಆರ್.ಇ.ಸಿ. ಯೋಜನೆ ಅಡಿಯಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಗುರುತಿಸಲಾಗಿರುವ ಉಪ ಗ್ರಾಮಗಳು ಯಾವುವು? ಎಷ್ಟು ಉಪ ಗ್ರಾಮಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡಲಾಗಿದೆ. ಉಳಿದವುಗಳಿಗೆ ಯಾವಾಗ ಸಂಪರ್ಕವನ್ನು ಕೊಡಲಾಗುವುದು?

ಆ. ವಿದ್ಯುದೀಕರಣಕ್ಕೆ ಬೇಕಾಗುವ ವಿವಿಧ ಸ್ತರದ ಸಾಮಗ್ರಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಕೊರತೆಯನ್ನು ನಿವಾರಿಸುವಲ್ಲಿ ಇಲಾಖೆಯ

ಕ್ರಮಗಳೇನು?

ಇ. ಕಾರ್ಕಳ : ಕಮ್ಮಾರು ವಿದ್ಯುತ್ ಲೈನ್‌ನ (10 ಕಿ.ಮೀ.) ಕೆಲಸ ಕಾರ್ಯಗಳನ್ನು ಯಾವಾಗ ಮುಗಿಸಲಾಗುವುದು?

ಉತ್ತರಿಸಲಿರುವ ಸಚಿವರು: ಶ್ರೀ ವೀರಕುಮಾರ್ ಅ.ಪಾಟೀಲ್ (ಇಂಧನ ರಾಜ್ಯ ಸಚಿವರು)

ಉತ್ತರ

ಅ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಆರ್.ಇ.ಸಿ. ಯೋಜನೆಯಡಿಯಲ್ಲಿ ವಿದ್ಯುದೀಕರಣಕ್ಕಾಗಿ ಒಟ್ಟು 184 ಉಪ ಗ್ರಾಮಗಳನ್ನು ಗುರುತಿಸಿದ್ದು ಇವುಗಳ ಹೆಸರುಗಳನ್ನು ಅನುಬಂಧದಲ್ಲಿ ಒದಗಿಸಿದೆ. ಈವರೆಗೆ ಯಾವ ಉಪ ಗ್ರಾಮಗಳಿಗೂ ಇನ್ನು ವಿದ್ಯುತ್ ಸಂಪರ್ಕ ಒದಗಿಸಿರುವುದಿಲ್ಲ. ಪ್ರಸ್ತುತ ವರ್ಷದಲ್ಲಿ 87 ಉಪ ಗ್ರಾಮಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡಲು ಕಾಮಗಾರಿಯನ್ನು ಟರ್ನ್‌ಕೀ ಆಧಾರದಲ್ಲಿ ಕೈಗೊಳ್ಳಲಾಗುವುದು.

ಆ. ಈ ಕೆಲಸಗಳನ್ನು ಟರ್ನ್‌ಕೀ ಆಧಾರದ ಮೇಲೆ ಕೊಡುತ್ತಿರುವುದರಿಂದ ಕಾಮಗಾರಿಗಳ ಕೊರತೆ ಉದ್ಭವಿಸುವುದಿಲ್ಲ.

ಇ. ಈ ಕಾಮಗಾರಿಯ ನಿರ್ವಹಣೆಯಲ್ಲಿ ಕೆಲವು ಭೂ ಮಾಲೀಕರ ಆಕ್ಷೇಪಣೆಗಳ ಮೇರೆಗೆ ನ್ಯಾಯಾಲಯದಲ್ಲಿ ದಾವೆಗಳಿರುವುದರಿಂದ, ಇದು ಅತ್ಯರ್ಥಗೊಂಡ ಕೂಡಲೇ ಸದರಿ ಕಾಮಗಾರಿಯನ್ನು ಏಪ್ರಿಲ್-ಮೇ 2002ರಲ್ಲಿ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಪ್ರಭಾಕರ ಬಂಗೇರ ಕೆ. ಗುರುತಿನ ಪ್ರಶ್ನೆ ಸಂಖ್ಯೆ-೯೦೦ಕ್ಕೆ ಅನುಬಂಧ

ಕ್ರ. ಸಂ.	ಉಪ ಗ್ರಾಮದ ಹೆಸರು
1.	ಅಲದಂಗಡಿ
2.	ಕಾವಲಗೆಬಾಗಲು
3.	ಕಾಲದಿಬ್ಬಡ
4.	ನೀರಕಡಕ
5.	ಗಂಗಣ್ಣ ದರಕಾಸು
6.	ಗೊಟ್ಟಪಾದಡಕ
7.	ಕುರಜೆ
8.	ತೆಂಡಜೆ
9.	ಪದೆಬಯಲು
10.	ನಾಯಜ
11.	ನೇರಳಕಟ್ಟೆ
12.	ಕಂಗಜದೇಲು
13.	ಮಂಜರ ಬೈಲು
14.	ಕಾಸನಡಕ
15.	ಪಾಲಡರಕೆ
16.	ಹರಚೆಬರು
17.	ಕಾಲಕಟ್ಟೆ

18. ಪರ್ಯೆಂಬ
19. ದೊಡ್ಡಪಾಡಿ ಬೈಲು
20.
21. ಕೆಲಿಗನಬೆಟ್ಟು
22. ಕನಕರಾಜ್
23. ಮೂಡುಕೋಡಿಗಲ್ಲು
24. ಮೇಗಿನಮನೆ
25. ಹೊಸಬೆಟ್ಟು
26. ಕಡಮ್ ಬೆಲಬೈಲು
27. ಆಲನಕಿತ್ತಡಿ
28. ಮಾಲಡಾಬ
29. ಪೆರಿಂಜೆ
30. ಕಾಮರಬೆಟ್ಟು
31. ಪಿರಡಿಬ
32. ಕಾಟರಬೆಟ್ಟು
33. ಮರೋಲಜ
34. ಕಾತರಪಲ್ಕೆ
35. ಪಡಿಬೆಟ್ಟು
36. ಬನ್ನೇರಾ
37. ಹೊಸಂಗಡಿ ಬೈಲು

38. ಮಾರ್ಬಲ

39. ಕಾಮತು ಬೈಲು

40. ಜುಂಡಾ ಬೈಲು

41. ಕರನಾಪುರ ಬೈಲು

42. ಕುರ್ಕೋಡಿ ಬೈಲು

43. ಚಂದ್ರಗಿರಿ ಬೈಲು

44. ಉಗಾದಿ ಬೈಲು

45. ಪಾರಂಗೋಲ್

46. ಮಡಿವಾರ ಬೈಲು

47. ಪಿಹಿಲಾ ಬೈಲು

48. ತೆಂಕನಾಡೇ ಬೈಲು

49. ಬನನಂಗಟ

50. ಬರಾಗೆ ಬೈಲು

51. ಬಲ್ಲೇಡಕಂಬಾ ಬೈಲು

52. ಪರಾಪು ಬೈಲು

53. ಕಂಡೇಲ್ ಬೈಲು

54. ಬರ್ಕೆ ಬೈಲು

55. ಕಿಲ್ಲಾಯ ಮಜೆಲು

56. ಬಡಕೋಡಿ

57. ಕಂಬ್ಲಾ

58. ಜರಿಗೇದಡಿ

59. ಕಟ್ಟಗೆಬಚ್ಚು

60. ಔರಜೆ

61. ಗಾಣದ ಕೊಟ್ಟಿಗೆ

62. ಕರ್ಮಕೋಣಿ

63. ನೀರಾ

64. ವೀರಜೆ

65. ಕುಕಜೇಮಲೆ

66. ಬರಡಿ

67. ಮೆಲುತಗುತ್ತು

68. ಪುತಲು

69. ಹಡಿಜರೆ

70. ಮಂಡಾಲಿಕೆ

71. ಕುಂತಿಯಾನ

72. ಶಾಂತಜೆ

73. ಕಲ್ಮಾರ್

74. ಕಲ್ಮಾರ್

75. ಮುಂದ್ಯಾರ ಕಲರಾ

76. ಪಾಲು ಬೈಲು

77. ಮೊಗ್ರಾಡಿ

78. ಅಂಬಾಲಕೇ ಬೈಲು

79. ಕಂಚಾನಹಳ್ಳಿ

80. ನಳಿಗೆ

81. ಹಾಲಿಕೆ

82. ದೋಡೊಟ್ಟು

83. ಮೂಡು ಬೈಲು

84. ದೋಡೊಟ್ಟು

85. ಕೆಡಿಲೂ

86. ಹಟಿನಂಜ

87. ನೂಜಿಬೈಲು

88. ಕೊಟಡಿ

89. ಹೊಯಿಡಿಲು

90. ರಾಜಪಾದೆ

91. ದಾರನಗಡಿ

92. ಉಪಾಧ್ಯಾಯಸಾಪಕ್

93. ಕುಂಚೇಲುಕಾಮ

94. ಕೊಟ್ಟಗೆ ಬೈಲು

95. ದುರಿಂಜೆ

96. ನೀರಾಕೆ

97. ಮನಿಪಾ ಬೈಲು

98. ಅಲಾಡೆಡಿ

99. ಯಂಡಲು

100. ಕೊಲಯದೊಟ್ಟು

101. ಚಿರಟ್ಟು

102. ತೋದರಿ

103. ಹರಿಹೋತಾ

104. ಸೂತಡೊಂಗಿ ಬೈಲು

105. ಹೊಸಮನೆಪಾದೆ

106. ಆಂದ್ರ

107. ಕರಿಯಲಾಧ್ಯ

108. ಪೇಡಿಬೈಲು

109. ಬಲ್ಲಾಕ

110. ಕರಿಯಾಡಕ ಪಾಲ್ಕೆ

111. ಪರದಡ್ಡೆ

112. ಪಿಜಿಲಾಂಡೆಜೆ

113. ಉಮಲಾಡಕ

114. ತುಂಬುನಂದಜಿದ್

115. ಬರೇಮೇಲು

116. ಪಂಚತೊಟ್ಟು

117. ಕಟ್ಟೆಪಂಚ ಬೈಲು

118. ಕೊಪ್ಪಮಜಲು

119. ಗುಟ್ಟಲ್ ಬಾರ್

120. ಯೆರಿಕೊಪ್ಪ

121. ಬಂಜರಾತಿಡೊರತ್

122. ಕಿರಬಡಿ

123. ಹಲವಕೊಡಿ

124. ಕಲಾಡ ಬೈಲು

125. ನರಬಡಿ

126. ಕಾಲಿಗೆ

127. ಕದನಂಜೆ

128. ಪಂಚತೊಟ್ಟು

129. ನಲ್ಲೂರು

130. ಕೆಂಪರಾಜ್

131. ಪಡಿಯೋಡಿ

132. ನಲ್ಲಾರ ಬೈಲು

133. ಮಂಜಲೇಕ್

134. ಕುರುಮಬೆಲಾಜೆ

135. ಕೋಡೆಲು

136. ಸುರಕುರಜೆ

137. ಮುಂಡೂರ್

138. ಕೊಕನಾಜೆ

139. ಪಾಪುಡ್‌ಕ ಬೈಲು

140. ಅರಾಕಲ

141. ಹೊಸಪಟ್ಟಣ

142. ಪಾಲಿಕರ ಬೆಟ್ಟು

143. ನಿಡಾದೆ

144. ಬನಗಿರಿ

145. ಕೊಗ್ಗಟಲಬೆಟ್ಟು

146. ಉಪ್ಪಾರ್

147. ಶಿರಾಬೈಲು

148. ಕುಲಕುಂದಾ

149. ಮುದ್ದೇಬೈಲು

150. ಪರಂದೂರ್

151. ಸುಂದನಗಡಿ

152. ರೇಕ್ಯ ಬೈಲು

153. ಕೊಟ್ಟಕೇಡ ಬೈಲು

154. ನುಗ್ಗಡ ಬೈಲು

155. ಮಜಿನ

156. ಕೇಕ್ಕೆರ್ ಬೈಲು

157. ಕರಪಾಡಿ

158. ಕೊಡಮೂರ್

159. ಪರಾನಿ

160. ಬೆಜಲಾಡಕ ಬೈಲು

161. ನಡಿ ಬೈಲು

162. ಬಚಾಡ ಬೈಲು

163. ಕಾರಂಜಿನ ಬೈಲು

164. ಪಜಿಕುಡೆಲ್

165. ಮದಿನಾಡುಪಲ್ಲಿ

166. ಅರಂತಾಡಿ ಬೈಲು

167. ಅಲಂಕಿಜೆ ಬೈಲು

168. ಕುರಿ ಬೈಲು

169. ಕನಿಂಕೋಡಿ ಬೈಲು

170. ನರಸಣ್ಣ ಬೈಲು

171. ಮಲಾಡಕ

172. ಬೈಲು

173. ಮಾಯ

174. ಶಿಶಿಲ

175. ಹತ್ಯಾಡಕ

176. ಕುರ್ಯ

177. ಮನಾಗರಮ್ ದಾಲ್

178. ನಿಯಾರ್

179. ಪುತಿಗೆ

180. ಶಿಬಜೆ

181. ಪನಾಗಲ

182. ಶಿಷ್ಟ

183. ದಾರಲುಡಕ

184. ಅನಾಡಕ

ಶ್ರೀ ಕೆ.ಪ್ರಭಾಕರ ಬಂಗೇರ: ಸನ್ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 184 ಉಪ ಗ್ರಾಮಗಳನ್ನು ಗುರುತಿಸಿದ್ದು ಅದನ್ನು ಟರ್ನ್‌ಕೀ ಆಧಾರದ ಮೇಲೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು. ಇನ್ನೊಂದು, ವಿದ್ಯುದೀಕರಣಕ್ಕೆ ಬೇಕಾದಂಥ ಉಪಕರಣಗಳ ಕೊರತೆ ನಮ್ಮಲ್ಲಿ ಸಾಕಷ್ಟು ಇದೆ. ಅದನ್ನು ನೀಗಿಸುವ ದೃಷ್ಟಿಯಿಂದ ಯಾವಾಗ ಕೊಡುತ್ತೀರಿ? ಇದರ ಜೊತೆಯಲ್ಲಿ ನಮ್ಮಲ್ಲಿ ಇಂಪ್ರೂವ್‌ಮೆಂಟ್ ಟಿ.ಸಿ.ಗಳು ಬೇಕಾಗಿದೆ. ಅದಕ್ಕೆ ಬೇಕಾಗಿರತಕ್ಕಂಥ ಸಾಮಗ್ರಿಗಳ ಕೊರತೆ ಕೂಡ ಇದೆ. ಅದನ್ನು ಯಾವಾಗ ನಮ್ಮ ಬೆಳ್ತಂಗಡಿಗೆ ಪೂರೈಸುತ್ತೀರಿ ಎಂಬುದನ್ನೂ ಕೂಡ ತಿಳಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ.ವೀರಕುಮಾರ್ ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಈ ಟರ್ನ್‌ಕೀ ಬೇಸಿಸ್ ಮೇಲೆ ಮೈಸೂರು ಲ್ಯಾಂಪ್ಸ್ ಅವರಿಗೆ ಕೆಲಸ ಕೊಟ್ಟಿದ್ದೇವೆ. ಏಪ್ರಿಲ್ ಫಸ್ಟ್‌ನಿಂದ ಅವರು ಕೆಲಸ ಪ್ರಾರಂಭ ಮಾಡುತ್ತಿದ್ದಾರೆ. ಈಗ ಟಿ.ಸಿ.ಗಳ ಬಗ್ಗೆ ತಾವು ಹೇಳಿದ್ದೀರಿ. ಅದರ ಬಗ್ಗೆ ವಿವರಗಳು ಇದ್ದರೆ ಕೊಡಿ. ಮೆಟೀರಿಯಲ್ಸ್ ಪ್ರೊಕ್ಯೂರ್‌ಮೆಂಟ್ ಮ್ಯಾನೇಜ್‌ಮೆಂಟ್‌ದವರಿಗೆ ಹೇಳಿ ನಾನು ಅರೇಂಜ್ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಬಳ್ತಂಗಡಿ ಬಗ್ಗೆ ಮಾತ್ರ ಹೇಳಬೇಕು.

ಶ್ರೀ ಕೆ.ಪ್ರಭಾಕರ ಬಂಗೇರ: 184 ಉಪ ಗ್ರಾಮಗಳನ್ನು ಗುರುತಿಸಿ 87 ಗ್ರಾಮಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ಬಾಕಿ ಉಳಿದಿರತಕ್ಕಂಥ ಉಪ ಗ್ರಾಮಗಳನ್ನು ಯಾವಾಗ ತೆಗೆದುಕೊಳ್ಳುತ್ತೀರಿ? ಮತ್ತು ಕಾರ್ಕಳ-ಕೆಮ್ಮಾರು ವಿದ್ಯುತ್ ಲೈನ್‌ನಲ್ಲಿ ಕೆಲವೊಂದು ಕಡೆ ನಾವು ಗುರುತಿಸಿದ ಆಲದಂಗಡಿ ಮಾರ್ಗದಲ್ಲಿ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಬದಲಿ ಲೈನುಗಳನ್ನು ಸೂಚಿಸಿದ್ದೇವೆ. ಅದು ರೈತರಿಗೆ ಕಡಿಮೆ ತೊಂದರೆ ಆಗುವಂಥ ಸ್ಥಳ. ಅದನ್ನು ತಾವು ಮಾಡಿ ಆ ಮೂಲಕ ಲೈನುಗಳನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಬದಲಿ ಲೈನನ್ನು ಸೂಚಿಸಿದ ಕಡೆಯಲ್ಲಿ ಕೊಟ್ಟು ರೈತರಿಗೆ ಉಪಕಾರ ಆಗುವ ದೃಷ್ಟಿಯಲ್ಲಿ ತಾವು ಸಹಕಾರ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಅಮರೇಗೌಡ ಎಲ್.ಬೈಯಾಪುರ: ಸನ್ಮಾನ್ಯ ಅಧ್ಯಕ್ಷರೇ, ಬೆಳ್ತಂಗಡಿ ಬಗ್ಗೆಯೇ ಹೇಳಬೇಕಾದರೆ ಆರ್.ಇ.ಸಿ. ಯೋಜನೆಯಲ್ಲಿ ಉಪ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ನೀಡಲು ಕಾಮಗಾರಿಗಳನ್ನು ಟರ್ನ್‌ಕೀ ಆಧಾರದ ಮೇಲೆ ಕೈಗೊಳ್ಳಲಾಗುವುದು ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಮಾರ್ಚ್ 31ನೇ ತಾರೀಖಿಗೆ ಈ ಆರ್.ಇ.ಸಿ. ಯೋಜನೆ ಮುಕ್ತಾಯಗೊಳ್ಳುತ್ತದೆ. ಸರ್ಕಾರ ಇದರ ಬಗ್ಗೆ ನಿಖರವಾದ ದಿನಾಂಕವನ್ನು

ಹೇಳಬೇಕಾಗುತ್ತದೆ. ಏಕೆಂದರೆ ಇದು ಇಡೀ ರಾಷ್ಟ್ರಕ್ಕೆ ಸಂಬಂಧ ಪಟ್ಟಿರುವುದರಿಂದ ಆರ್.ಇ.ಸಿ. ಸ್ಕೀಮ್‌ನಲ್ಲಿ ನಾವು ಏನು ಸಾಲ ತೆಗೆದುಕೊಂಡು ಕೆಲಸ ಪ್ರಾರಂಭಿಸಿದ್ದೇವೆ, ಅದು 31ನೇ ಮಾರ್ಚ್‌ಗೆ ಕೊನೆಯಾಗುತ್ತದೆ. ಇದನ್ನು ಇನ್ನೂ ಮುಂದುವರಿಸುತ್ತಾರೆಯೇ ಎಂಬ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕು.

ಶ್ರೀ ಎ.ವೀರಕುಮಾರ್ ಪಾಟೀಲ್: ಮಾನ್ಯ ಅಧ್ಯಕ್ಷರೇ, ಆರ್.ಇ.ಸಿ. ಸ್ಕೀಮ್ ಕಂಟಿನ್ಯೂ ಆಗುತ್ತದೆ. ಅದು ಈ ವರ್ಷ ಅಷ್ಟೇ ಅಲ್ಲ ಮುಂದೆ ಕೂಡ ಕಂಟಿನ್ಯೂ ಆಗುತ್ತದೆ. ಮಾನ್ಯ ಶಾಸಕರು ಹೇಳಿದ ಪ್ರಕಾರ ಉಡುಪಿ-ಮಂಗಳೂರು ಡೆಪ್ಯುಟಿ ಕಮೀಷನರ್ ಹತ್ತಿರ ಈ ಲೈನ್ ಬಗ್ಗೆ ಕೆಲವು ಕೇಸುಗಳು ಇವೆ. ಆ ಕೇಸುಗಳು ಕ್ಲಿಯರ್ ಆದ ಮೇಲೆ ಲೈನ್ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ತಾವು ಏನು ಸಲಹೆಗಳನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ಅಧಿಕಾರಿಗಳು ಅವುಗಳನ್ನು ಗುರುತು ಮಾಡಿ ಆ ಪ್ರಕಾರ ಲೈನ್‌ನ್ನು ಮಾಡುತ್ತೇವೆ. ಆರ್.ಇ.ಸಿ. ಯೋಜನೆಯನ್ನು ಮುಂದುವರೆಸುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೇ, ಆರ್.ಇ.ಸಿ. ಪ್ರೋಗ್ರಾಮ್‌ನಲ್ಲಿ ಕರ್ನಾಟಕದಲ್ಲಿ 156 ಕೋಟಿ ರೂಪಾಯಿಗಳು ಬಿಡುಗಡೆಯಾಗುವುದಕ್ಕೆ ಕರ್ನಾಟಕ ಸರ್ಕಾರದಿಂದ ಏನೂ ಗ್ಯಾರಂಟಿ ಕೊಟ್ಟಿಲ್ಲವಾದ್ದರಿಂದ ಇದು ಪೆಂಡಿಂಗ್ ಇದೆಯೆಂದು ನಾನು ಕಳೆದ ಸಲ ಪ್ರಶ್ನೆ ಕೇಳಿದಾಗ ಉತ್ತರ ಬಂದಿದೆ. ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕು. ಆರ್.ಇ.ಸಿ. ಪ್ರೋಗ್ರಾಮ್‌ನಿಂದ ಕೇಂದ್ರಸರ್ಕಾರದಿಂದ 156 ಕೋಟಿ ರೂಪಾಯಿಗಳ ಹಣ ಬಿಡುಗಡೆಯಾಗುವುದಕ್ಕೆ ಕರ್ನಾಟಕ ಸರ್ಕಾರ ಗ್ಯಾರಂಟಿ ಕೊಟ್ಟಿಲ್ಲ. ಆದ್ದರಿಂದ ಹಣ ಬಿಡುಗಡೆಯಾಗಿಲ್ಲವೆಂದು ನನಗೆ ಉತ್ತರ ಬಂದಿದೆ. ತಾವು ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಎ.ವೀರಕುಮಾರ್ ಪಾಟೀಲ್: ಕರ್ನಾಟಕ ಸರ್ಕಾರದಿಂದ ಗ್ಯಾರಂಟಿ ಕೊಟ್ಟಿದ್ದೇವೆ. ಅಮೌಂಟ್ ರಿಲೀಸ್ ಆಗುತ್ತಿದೆ.

ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆಗಳಲ್ಲಿ ಕಲ್ಲು-ಮರಳು ಸಾಗಾಣಿಕೆ ವಾಹನಗಳಿಂದ ಅಪಘಾತ ಸಂಭವಿಸುತ್ತಿರುವುದರ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 87(529)

ಸದಸ್ಯರ ಹೆಸರು: ಶ್ರೀ ಶ್ರೀನಿವಾಸಗೌಡ, ಕುದುಪನಹಳ್ಳಿ ಕೆ.(ಕೋಲಾರ)

ಪ್ರಶ್ನೆ